# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **384 (559)** |
| ಸದಸ್ಯರ ಹೆಸರು | : | ಶ್ರೀ. ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2020 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 3 ಟೈಯರ್ ಸಿಸ್ಟಂ ವ್ಯವಸ್ಥೆ ಎಂದಿನಿಂದ ಜಾರಿ ಮಾಡಲಾಗಿದೆ: ಜಾರಿಮಾಡಿದ್ದಲ್ಲಿ ಅದರ ನಿಯಮಗಳೇನು; | ರಾಜ್ಯದಲ್ಲಿ 3 ಟೈಯರ್ (5+3+4) ವ್ಯವಸ್ಥೆಯನ್ನು ಇದುವರೆವಿಗೂ ಸಂಪೂರ್ಣವಾಗಿ ಜಾರಿ ಮಾಡಲಾಗಿರುವುದಿಲ್ಲ.<br><br>ಡಾ.ರಾಜಾರಾಮಣ್ಣರವರ ವರದಿಯಲ್ಲಿ ಕರ್ನಾಟಕದಲ್ಲಿ 8 ವರ್ಷಗಳ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಲಾಗಿರುವಂತೆ 2001-02 ರಲ್ಲಿ 5 ನೇ ತರಗತಿಯನ್ನು ಪ್ರಾಥಮಿಕ ಶಿಕ್ಷಣ ವಿಭಾಗಕ್ಕೆ ಸೇರಿಸಿ 1 ರಿಂದ 5 ತರಗತಿಗಳ ಕಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಪರಿವರ್ತಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಪಿಬಿಸಿ 2002. ದಿನಾಂಕ: 17-05-2003 ರಂತೆ ಮೂರು ಕಿ.ಮೀ ವ್ಯಾಪ್ತಿಯಲ್ಲಿ ಪ್ರೌಢ ಶಾಲೆಗಳಿಲ್ಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಪೈಕಿ ಹೆಚ್ಚು ಮಕ್ಕಳಿರುವ ಆಯ್ದ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ.<br><br>ಮೂರನೇ ಹಂತವಾದ 9 ರಿಂದ 12ನೇ ತರಗತಿವರೆಗೆ ವಿಲೀನಗೊಳಿಸುವ ಕಾರ್ಯ ಪ್ರಾರಂಭವಾಗಿಲ್ಲ.<br><br>ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಛೇರಿಯ ಸುತ್ತೋಲೆ ದಿನಾಂಕ:05-04-2013 ರಂತೆ 2013-14 ನೇ ಸಾಲಿನಿಂದ ಪ್ರಾಥಮಿಕ ಶಿಕ್ಷಣ ಹಂತವನ್ನು 1 ರಿಂದ 8ನೇ ತರಗತಿಗೆ ನಿಗದಿಪಡಿಸಲಾಗಿದೆ. |
| ಆ. | ಪ್ರೌಢ ಶಾಲೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಸಹ ಶಿಕ್ಷಕರಿಗೆ ಪದವಿ ಪೂರ್ವ ವಿಭಾಗಕ್ಕೆ ಪದೋನ್ನತಿಯನ್ನು ಏಕೆ ನಿಲ್ಲಿಸಲಾಗಿದೆ; ನಿಲ್ಲಿಸಿದ್ದರೆ ಕಾರಣಗಳೇನು; | 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಇ 94 ದಿನಾಂಕ:27/05/1998ರಲ್ಲಿ ಶೇಕಡ 50ರಷ್ಟು ಉಪನ್ಯಾಸಕರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಮತ್ತು ಶೇಕಡ 50ರಷ್ಟು ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ವೃಂದಕ್ಕೆ ಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿತ್ತು.<br>2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಡಿ 2009 ದಿನಾಂಕ:15/05/2014ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಪರಿಷ್ಕರಣೆ ಮಾಡಿ ಶೇಕಡ 75ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮತ್ತು ಶೇಕಡ |

| | | |
|---|---|---|
| | | 25ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ.<br>3. ಬಡ್ತಿ ಕೋಟದಲ್ಲಿ ಶೇಕಡ 50ರಷ್ಟು ಪದೋನ್ನತಿ ನೀಡಿದ್ದರಿಂದ ಈಗಾಗಲೇ 395 ಹುದ್ದೆಗಳು ಹೆಚ್ಚುವರಿಯಗಿದ್ದು, ಶೇಕಡ 75:25ರ ಬಡ್ತಿ ಕೋಟದ ಹುದ್ದೆಗಳು ಲಭ್ಯವಿಲ್ಲದ ಕಾರಣ, ಬಡ್ತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ. | ಇದರಿಂದ ಅನೇಕ ಸ್ನಾತಕೋತ್ತರ ಪದವಿ ಪಡೆದವರ ಯಾವುದೇ ಬಡ್ತಿ ಇಲ್ಲದೆ ನಿವೃತ್ತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು: | 2014ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈಗಾಲೇ 395 ಹುದ್ದೆಗಳು ಹೆಚ್ಚುವರಿಯಾಗಿದ್ದು, ಶೇಕಡ 75:25ರ ಬಡ್ತಿ ಕೋಟದ ಹುದ್ದೆಗಳು ಹೆಚ್ಚುವರಿಯಾಗಿದ್ದು, ಶೇಕಡ 75:25ರ ಬಡ್ತಿ ಕೋಟದ ಹುದ್ದೆಗಳು ಲಭ್ಯವಿರುವುದಿಲ್ಲ. ಬಡ್ತಿ ಕೋಟಾದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ವಯೋನಿವೃತ್ತಿ, ರಾಜೀನಾಮೆ ಹಾಗೂ ನಿಧನದಿಂದ ತೆರವಾಗುವ ಹುದ್ದೆಗಳನ್ನು ಮುಂಬಡ್ತಿ ನೀಡಲು ಪರಿಗಣಿಸಲಾಗುವುದು. |
| ಈ. | 1 ರಿಂದ 5ರವರೆಗೆ ಪ್ರಾಥಮಿಕ, 6–8 ಪ್ರೌಢ ಹಾಗೂ 9–12 ಹಿರಿಯ ಪ್ರೌಢ ಈ ವ್ಯವಸ್ಥೆ ಇದ್ದಾಗ್ಯೂ ಕೂಡ ಇನ್ನೂ ಅನೇಕ ಕಡೆಗೆ 1–7 8–10 ಹಾಗೂ 11–12 ಜಾರಿಯಲ್ಲಿರುವುದು ನಿಜವೇ; ಹಾಗೂ ಇನ್ನೂ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು ಸತತವಾಗಿ ನಡೆಯುತ್ತಿರುವುದು ಒಂದಕ್ಕೊಂದು ಹೊಂದಾಣಿಕೆ ಇಲ್ಲದೇ ಶಿಕ್ಷಣ ವ್ಯವಸ್ಥೆ ಹದಗೆಟ್ಟಿರುವುದು ನಿಜವೇ; ನಿಜವಿದ್ದಲ್ಲಿ ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು | ಹೌದು<br>1 ರಿಂದ 8 ನೇ ತರಗತಿ ಇರುವ ಶಾಲೆಗಳಿಗೆ ತರಬೇತಿ ಹೊಂದಿದ ಪದವೀಧರ ಕಲಾ, ವಿಜ್ಞಾನ ಶಿಕ್ಷಕರನ್ನು ಹಂತ–ಹಂತವಾಗಿ ನೇಮಕ ಮಾಡಲು ಕ್ರಮವಹಿಸಲಾಗುತ್ತಿದೆ. 9 ಮತ್ತು 10 ನೇ ತರಗತಿಗಳು ಇರುವ ಶಾಲೆಗಳಲ್ಲಿ ವಿಷಯವಾರು ಶಿಕ್ಷಕರು ಇರುವುದರಿಂದ ಶಿಕ್ಷಣದ ಗುಣಮಟ್ಟಕ್ಕೆ ಧಕ್ಕೆಯಾಗುತ್ತಿಲ್ಲ.<br>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದರ ಮೂಲಕ ಪಾಠ–ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. ಸರ್ಕಾರಿ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢ ಶಾಲೆಗಳ ಆಡಳಿತಾತ್ಮಕ ವಿಷಯಗಳು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರಿಂದ ನಿರ್ವಹಿಸಲ್ಪಡುತ್ತಿದೆ. ಈ ಎಲ್ಲಾ ಕ್ರಮಗಳಿಂದ ಶಿಕ್ಷಣ ವ್ಯವಸ್ಥೆ ಹದಗೆಡದಂತೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಪಿ 24 ಎಸ್‌ಎಲ್‌ಬಿ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು